**<u>ದಿನಾಂಕಃ 30.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ</u>**

1) ನಾನು ಚನ್ನಪಟ್ಟಣ ತಾಲ್ಲೂಕಿನಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ನನಗೆ ಸೇರಿದಂತೆ ಸ್ವತ್ತು ಇರುತ್ತದೆ. ಅದರ ಸಂಖ್ಯೆ 2525 ಆಗಿರುತ್ತದೆ. ಸದರಿ ಸ್ವತ್ತು ಸರ್ವೆ ನಂ.125 ಮತ್ತು 124 ರ ಪಕ್ಕದಲ್ಲಿ ಇರುತ್ತದೆ. ಆ ರೀತಿ ನನ್ನ ಸ್ವತ್ತು ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನನ್ನ ಸ್ವತ್ತು ಇರುವುದಾಗಿ ತಿಳಿಸಿರುತ್ತೇನೆ. ಸಾಕ್ಷಿಯು ತನ್ನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನೋಡಿ ಅದರಲ್ಲಿ ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ತನ್ನ ಸ್ವತ್ತು ಇರುವುದಾಗಿ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ಹೊನ್ನಿಗನಹಳ್ಳಿ ಸರ್ವೆ ನಂ. 124/1, 124/2, 124/3 ರಲ್ಲಿ ನನಗೆ ಸ್ವತ್ತು ಇದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ.14 ರಿಂದ 24 ರವರೆಗಿನ ಭಾವಚಿತ್ರಗಳಲ್ಲಿ ಕಾಣುವ ಸ್ವತ್ತು ಸರ್ವೆ ನಂ. 124/1 ರಲ್ಲಿ ಬರುತ್ತವೆ.

2) ವಾದಿಗೆ ಸೇರಿದ ಸ್ವತ್ತು ಯಾವ ಸರ್ವೆ ನಂಬರ್ ನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ವಾದಿಗೆ ಯಾವುದೇ ಜಾಗ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಿಡಿ.1, 3 ರಿಂದ 6 ರ ಪಹಣಿ ಪತ್ರಿಕೆಗಳನ್ನು ನನ್ನ ವಕೀಲರ ಮೂಲಕ ಹಾಜರುಪಡಿಸಿರುತ್ತೇನೆ, ಅವುಗಳಲ್ಲಿ ಸ್ವತ್ತು ದರ್ಗಾ ಹೆಸರಿನಲ್ಲಿ ಇರುವುದಾಗಿ ಉಲ್ಲೇಖಿಸಲಾಗಿದೆ. ನಿಡಿ.1, 3 ಮತ್ತು 4 ರ ಪಹಣಿ ಪತ್ರಿಕೆಗಳು ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿಡಿ.5 ರ ಪಹಣಿ ಪತ್ರಿಕೆಯಲ್ಲಿ 5 ರಿಂದ 6 ಜನರ ಹೆಸರು ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ.5 ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿರುವ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿಲ್ಲ. ನಿಡಿ.6 ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿರುವ ಮೊಹಮ್ಮದ್ ಹುಸ್ಸೇನ್ ಖಾನ್ ಬಿನ್ ನೂರ್ ಖಾನ್ ಎಂಬ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ.

3) ಸರ್ವೆ ನಂ. 124/2ಬಿ ಮತ್ತು 124/3ಎ ನಲ್ಲಿ ಇರುವ ಪಹಣಿ ಪತ್ರಿಕೆಗಳಲ್ಲಿ ಯಾರ ಯಾರ ಹೆಸರುಗಳು ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 124/2ಬಿ ಪೋಡಿ ಆದ ನಂತರ ಅದು ಸರ್ವೆ ನಂ. 124/8 ಎಂದು ಬದಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಸ್ವತ್ತು ವಾದಿಯ ಹೆಸರಿಗೆ ಪೋಡಿ ಆಗಿ ಹದ್ದುಬಸ್ತಿಗೆ ಒಳಪಟ್ಟಿದೆ ಎಂದರೆ ಸರಿಯಲ್ಲ. ಸರ್ವೆ ನಂ. 124/3ಎ ನಲ್ಲಿ ಇರುವ ವಾದಿಯ ಸ್ವತ್ತು ಪೋಡಿ ಆದ ನಂತರ ಅದು ಸರ್ವೆ ನಂ. 124/9 ಎಂದು ಬದಲಾಗಿದೆ ಎಂದರೆ ಸರಿಯಲ್ಲ.

4) ವಾದಿಯು ಈ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ವಾದಿಯು ವಾದ ಪತ್ರದಲ್ಲಿ ತನಗೆ ದಾವಾ ಸ್ವತ್ತು ಯಾವ ವಿಧವಾಗಿ ಬಂದಿದೆ ಎಂದು ನಮೂದು ಮಾಡಿರುವುದಿಲ್ಲ. ವಾದಿಯು ದಾವಾ ಸ್ವತ್ತನ್ನು ದಿಃ27.03.1997 ರಂದು ಶಿವಕುಮಾರ್ ರವರಿಂದ ಖರೀದಿ ಮಾಡಿರುವುದಾಗಿ ಹೇಳಿ ಈ ದಾವೆ ಹೂಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಿಃ27.03.1997 ರಂದು ವಾದಿಯ ಹೆಸರಿಗೆ ದಾವಾ ಸ್ವತ್ತಿನ ಕುರಿತು ದಾಖಲಾಗಿರುವ ನೊಂದಾಯಿತ ಕ್ರಯ ಪತ್ರದ ಊರ್ಜಿತತೆಯನ್ನು ನಾನಾಗಲೀ ಅಥವಾ ನನ್ನ ಸಹಚರರಾಗಲೀ ಯಾರೂ ಸಹ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ.

5) ಸರ್ವೆ ನಂ. 124/1, 124/2, 124/3 ರ ಸ್ವತ್ತುಗಳನ್ನು ದಿಃ13.02.1948 ರಲ್ಲಿ ಎಲ್.ಸಿ ಶ್ರೀನಿವಾಸಯ್ಯ ರವರು ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನು ದಿಃ07.06.1960 ರಂದು ಎಲ್.ಸಿ ಶ್ರೀನಿವಾಸಯ್ಯ ಮತ್ತು ಆತನ ಸಹೋದರರು ಕೂಡಿ ಎ.ಎಸ್.ಕೃಷ್ಣಸಿಂಗ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮೂರು ಸ್ವತ್ತುಗಳನ್ನು ಎ.ಎಸ್.ಕೃಷ್ಣಸಿಂಗ್ ರವರು ರೆವಿನ್ಯೂ ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ. 124/1, 124/2, 124/3 ರ ಸ್ವತ್ತುಗಳಲ್ಲಿ ಮಾಡಲಾಗಿರುವ ರೆವಿನ್ಯೂ ನಿವೇಶನಗಳನ್ನು 50 ರಿಂದ 60 ಜನರು ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಖರೀದಿ ಮಾಡಿದ ಜನರ ಪೈಕಿ ವಾದಿಗೆ ಮಾರಾಟ ಮಾಡಿದ ಮಾರಾಟಗಾರರ ಪೂರ್ವ ಕ್ರಯದಾರರು ಒಟ್ಟು ಎರಡು ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಕ್ರಯಕ್ಕೆ ಪಡೆದ ನಂತರ ನೊಂದಣಿ ಕ್ರಯ ಪತ್ರದ ಆಧಾರದ ಮೇಲೆ ರೆವಿನ್ಯೂ ಖಾತೆಗಳು ದಾಖಲಾಗಿವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ.4 ರಂತೆ ಖಾತೆ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

6) ನಿಪಿ.12 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಯಲ್ಲಿ ಎಲ್ಲಿಯೂ ಸಹ ನಮಗೆ ಸೇರಿದ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತಿನ ಖಾತೆಯು ವಂದಾರ ಗುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ವಾದಿಯ ಹೆಸರಿನಲ್ಲಿ ದಾಖಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಹಕ್ಕು ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿಯು ದಾವಾ ಸ್ವತ್ತನ್ನು ಖರೀದಿಸಿದ ದಿನದಿಂದ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೂ ಪೂರ್ವದಲ್ಲಿ ಆ ಸ್ವತ್ತಿನಲ್ಲಿ ವಾದಿಯ ಮಾರಾಟಗಾರರು ಇದ್ದರು ಎಂದರೆ ಸರಿಯಲ್ಲ.

7) ಸರ್ವೆ ನಂ. 124 ರಲ್ಲಿ ಒಂದು ಚರ್ಚ ಇದೆ ಎಂದರೆ ಸರಿ. ಸದರಿ ಚರ್ಚನಿಂದ ದಾವಾ ಸ್ವತ್ತು 60 ಮೀಟರ್ ಅಂತರದಲ್ಲಿ ಇದೆ. ಆ ಚರ್ಚ ಕಟ್ಟುವಾಗ ನಮ್ಮ ಜನಾಂಗದವರು ತಕರಾರು ಮಾಡಿದ್ದೆವು. ಆ ರೀತಿ ತಕರಾರು ಮಾಡಿದ್ದೆವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ. 124 ರಲ್ಲಿ ಚರ್ಚ ಅಕ್ಕಪಕ್ಕದಲ್ಲಿ ಸುಮಾರು 370 ಮನೆಗಳು ಇರುತ್ತವೆ. ದಾವಾ ಸ್ವತ್ತು ಖಾಲಿ ನಿವೇಶನ ಆಗಿರುವ ಕಾರಣ ಅದನ್ನು ಲಪಟಾಯಿಸುವ ಸಲುವಾಗಿ ವಾದಿಗೆ ತೊಂದರೆ ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇರುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**